ಇದು ಒಂದು ಸುದ್ದಿ ಅಂದರೆ ಈ ಸುದ್ದಿ ಕರ್ನಾಟಕ ರಾಜ್ಯದ ಜನಕ್ಕೆ ಒಂದು ರೀತಿಯ ಕ್ಷೋಭೆಯನ್ನು ತರತಕ್ಕಂಥ ಸುದ್ದಿ. ಬೆಳಗಾವಿ ಕರ್ನಾಟಕದ ಒಂದು ಭಾಗ ಹಾಗೂ ಅವಿಭಾಜ್ಯ ಅಂಗ ಎನ್ನತಕ್ಕಂಥಾದ್ದು ಸಿದ್ಧ ವಾಗಿರತಕ್ಕಂಥಾದ್ದು. ಮತ್ತೆ ಅದರ ಪ್ರಸ್ತಾಪಕ್ಕೆ ಹೋಗುವುದಿಲ್ಲ ಎಂದು ಶಾಸನಸಭೆಯ ನಿರ್ಣಯ ವಾಗಿದೆ ಮುಖ್ಯ ಇದನ್ನು ಪದೇ ಪದೇ ಪ್ರಸ್ತಾಪ ಮಾಡುವುದು ಬೇಡ, ಇದು ಅಂತಿಮ ಎನ್ನತಕ್ಕಂಥ ಮಾತನ್ನು ಸಭಾ ನಾಯಕರಾದ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದು ಅದಮೇಲೂ ಕೂಡ ರಾಜ್ಯದ ಮುಖ್ಯ ಮಂತ್ರಿಗಳ ಮಾತಿನ ವಿರುದ್ಧ, ಕೇಂದ್ರ ಸರ್ಕಾರ ಮಾಡಿದಂಥ ತೀರ್ಪಿನ ವಿರುದ್ಧ ಸಣ್ಣ ಒಂದು ಸಭೆ ತೀರ್ಮಾನ ಮಾಡುವುದು ಅಂದರೆ ನಮ್ಮ ರಾಜ್ಯದಲ್ಲಿ ಅಂತಹ ಒಂದು ಕಾರ್ಪೊರೇಷನ್ ಅಸ್ತಿತ್ವದಲ್ಲಿ ಇರಬೇಕೇ ಎನ್ನತಕ್ಕಂಥ ಪ್ರಶ್ನೆ ಬರುತ್ತದೆ. ನಾನು ತಮ್ಮ ಮೂಲಕ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ. ತಕ್ಷಣ ಇಂತಹ ರಾಜ್ಯ ವಿರೋಧಿ, ಜನ ವಿರೋಧಿ, ಕನ್ನಡ ವಿರೋಧಿ ಮತ್ತು ಶಾಸನಸಭೆಯ ಎಲ್ಲ ಅಭಿಪ್ರಾಯಗಳ ವಿರೋಧಿಯಾಗಿ ವಿರುದ್ಧವಾಗಿ ನಿರ್ಣಯ ಮಾಡಿರತಕ್ಕಂಥ ಈ ಒಂದು ಬೆಳಗಾವಿ ಪುರಸಭೆಯನ್ನು ಅಥವಾ ಕಾರ್ಪೊರೇಷನ್‌ನ್ನು ರದ್ದು ಮಾಡ ತಕ್ಕಂಥ ನಿರ್ಣಯವನ್ನು ಈ ಶಾಸನ ಸಭೆಯ ಮೂಲಕ ಮಾಡಬೇಕು. ಮಾನ್ಯ ಮುಖ್ಯ ಮಂತ್ರಿಗಳು ಇಂತಹ ಒಂದು ರದ್ದು ಮಾಡತಕ್ಕಂಥ ನಿರ್ಣಯವನ್ನು ಅವರೇ ಮಂಡಿಸಬೇಕು ಅದಕ್ಕೆ ನಮ್ಮೆಲ್ಲರ ಸಂಪೂರ್ಣ ಸಹಕಾರ ಇದೆ ಎಂದು ತಮ್ಮ ಮೂಲಕ ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ.

ಬೆಳಗಾಂ ನಗರಪಾಲಿಕೆಯವರು, ಬೆಳಗಾಂನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಮಾಡಿದ ನಿರ್ಣಯದ ಪ್ರಸ್ತಾವನೆ.

† ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ಇವತ್ತು ಬಹಳ ಗಂಭೀರವಾದಂಥ ಪರಿಸ್ಥಿತಿ ಇದೆ. ಇತ್ತೀಚೆಗೆ ಚುನಾವಣೆ ನಡೆದು ಅಲ್ಲಿ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಅಧಿಕಾರಕ್ಕೆ ಬಂದಿದ್ದಾರೆ. ಆದರೂ ಬೆಳಗಾವಿ ನೂರಕ್ಕೆ ನೂರು ಅಚ್ಚ ಕನ್ನಡದ ಪ್ರದೇಶ ಎಂದು ನಿರ್ಧಾರವಾಗಿದೆ. ಆ ಪ್ರಶ್ನೆಯನ್ನು ಮತ್ತೆ ಮತ್ತೆ ಕೆದಕತಕ್ಕಂಥಾದ್ದು ಯಾವುದೇ ಒಂದು ದೃಷ್ಟಿಯಿಂದ ಒಳ್ಳೆಯದಲ್ಲ, ಬಹಳ ದಿವಸ ದಿಂದ ಅಂದರೆ ನಾನು ಈ ಸಭೆಗೆ ಬಂದಾಗಿನಿಂದಲೂ ಹೇಳುತ್ತಾ ಇದ್ದೇನೆ. ಬೆಳಗಾವಿ ಮಹಾನಗರ ಪಾಲಿಕೆ ಮೇಲೆ ಮರಾಠಿ ಧ್ವಜವನ್ನು ಏನಂ ಹಾಕಿದ್ದಾರೆ, ಆ ಧ್ವಜವನ್ನು ತೆಗೆಯಬೇಕು ಎನ್ನತಕ್ಕಂಥ ಒತ್ತಡವನ್ನು ನಾನು ಅನೇಕಸಾರಿ ತಂದೆ. ಆಗ ರಾಜಮಹಾರಾಜರ ಧ್ವಜಗಳೆಲ್ಲಾ ಹೋಗಿವೆ, ಈ ಧ್ವಜ ಬೇಡ ಎನ್ನತಕ್ಕಂಥ ತಮ್ಮ ಅಭಿಪ್ರಾಯವನ್ನು ತಾವು ಹೇಳಿದಿರಿ. ಈ ಬಗ್ಗೆ ಸರ್ಕಾರ ಈ ಕೂಡಲೇ ನಿರ್ಧಾರ ತೆಗೆದುಕೊಳ್ಳುತ್ತೇವೆ. ಇದರ ಬಗ್ಗೆ ಒಂದು ಕಾನೂನು ಮಾಡುತ್ತೇವೆ, ಈ ಪುರಸಭೆಗಳ ಮೇಲೆ ಯಾವ ಬಾವುಟಗಳನ್ನು ಹಾಕಬೇಕು ಎನ್ನತಕ್ಕಂಥ ನಿರ್ಧಾರಕ್ಕೆ ಬರುತ್ತೇವೆ ಎಂದು ಹೇಳಿದ ಮೇಲೂ ಸಹ ಈ ಸರ್ಕಾರ ಯಾವ ನಿರ್ಧಾರಕ್ಕೂ ಬರಲಿಲ್ಲ. ಇವತ್ತು ನಿಜವಾಗಲೂ ಬೆಳಗಾವಿಗೆ ಬೆಂಕಿ ಬಿದ್ದಿದೆ. ಅಲ್ಲಿ ಧಾರಾಳವಾಗಿ ಬೆಳಗಾವಿಯನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕು ಎಂದು ನಿರ್ಣಯಮಾಡಿ ಅಲ್ಲಿ ಮರಾಠಿ ಧ್ವಜವನ್ನು ಹಾಕಿ, ಅಲ್ಲಿ ದೊಡ್ಡ ಪ್ರಚೋದನೆಮಾಡಿ, ಕರ್ನಾಟಕದ ಹಿತಕ್ಕೆ ಕನ್ನಡ ನಾಡಿನ ಹಿತಕ್ಕೆ ಅಪಾರವಾದಂಥ ಧಕ್ಕೆ ಇವತ್ತು ಸಂಭವಿಸಿದೆ. ಇವತ್ತು ಸರ್ಕಾರದ ಏಕಮೇವ ನಿರ್ಧಾರ ಆಗಬೇಕಾಗಿರತಕ್ಕಂಥಾದ್ದು ಕರ್ನಾಟಕಕ್ಕೆ ಆಗೌರವವಾಗಿ, ಕರ್ನಾಟಕದ ನಿರ್ಧಾರವನ್ನು ಬದಲಾಯಿಸಿ, ಕರ್ನಾಟಕದ ಹಿತಚಿಂತನೆಗೆ ವಿರುದ್ಧವಾದಂಥ ಯಾವುದೇ ನಿರ್ಣಯವನ್ನು ಅವರು ಮಾಡಿದರೂ ಕೂಡ ಕಾಯಿದೆ ಪ್ರಕಾರ ಆ ಒಂದು ಮಹಾನಗರಪಾಲಿಕೆಯನ್ನು ರದ್ದುಮಾಡ ಬೇಕು. ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಹೇಳುತ್ತಾ ಇದೇನೆ. ಒಂದು ಕ್ಷಣವೂ ಸಹ ಬಿಡದೆ ಈ ಕೂಡಲೇ ತಾವು ತಂತಿ ಮೂಲಕ ಆ ಮಹಾನಗರಪಾಲಿಕೆಯನ್ನು ರದ್ದುಪಡಿಸಿದ್ದೇನೆ ಎಂದು ಹೇಳಲೇಬೇಕು. ಇಲ್ಲದೇಹೋದರೆ ಇದು ನಿಜವಾಗಲೂ ಕರ್ನಾಟಕಕ್ಕೆ ತೀವ್ರ ಅಪರಾಧವಾಗುತ್ತದೆ, ಬಹಳ ದೊಡ್ಡ ದುರಂತಕ್ಕೆ ಎಡೆ ಕೊಡುತ್ತದೆ ಎನ್ನುವ ಮಾತನ್ನು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತಾ ಇದ್ದೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).— ಸನ್ಮಾನ್ಯ ಅಧ್ಯಕ್ಷರೇ, ಬೆಳಗಾಂ ನಗರ ಪಾಲಿಕೆಯವರು ಬೆಳಗಾಂ ನಗರವನ್ನು ಮಹಾರಾಷ್ಟ್ರಕ್ಕೆ ಸೇರ್ಪಡೆಯಾಗಬೇಕೆಂಬ ಬಗ್ಗೆ ಒಂದು ನಿರ್ಣಯವನ್ನು ಪಾಸುಮಾಡಿದರು ಎನ್ನುವಂತಹ ವಿಚಾರವನ್ನು ನಾನೂ ಕೂಡ ತಿಳಿದುಕೊಂಡಿದ್ದೇನೆ. ಇದು ಅವರು ಮಾಡಿದ್ದು ಹೊಸದೇನೂ ಅಲ್ಲವೆಂದು ನನಗೆ ಅನ್ನಿಸುತ್ತಿದೆ. ಏಕೆಂದರೆ ಆ ಮಹಾರಾಷ್ಟ್ರ ಏಕೀಕರಣ ಸಮಿತಿಯವರು ಆ ಭಾಗದಲ್ಲಿ ಅಸ್ತಿತ್ವದಲ್ಲಿದ್ದು ಅವರು ಚಟುವಟಿಕೆ ಏನು ಮಾಡುತ್ತಿದ್ದಾರೆ, ಅದಕ್ಕೆ ಅನುಗುಣವಾಗಿ ಅವರು ಒಂದು ಠರಾವು ಪಾಸು ಮಾಡಿದ್ದಾರೆ. ನಾನು ಅನೇಕ ಸಲ ಮಹಾಜನ್ ವರದಿಯ ಬಗ್ಗೆ, ನಮ್ಮ ಮತ್ತು ಮಹಾರಾಷ್ಟ್ರದ ಗಡಿ ಬಗ್ಗೆ ಸರ್ಕಾರದ ನಿಲುವಿನ ಬಗ್ಗೆ

ಸ್ಪಷ್ಟಪಡಿಸಿದ್ದೇನೆ. ಇದರ ಬಗ್ಗೆ ಯಾವುದೇ ವಿವಾದ ಇಲ್ಲ ವಿವಾದ ಇಲ್ಲಅಂದ ಮೇಲೆ ಯಾವುದಾದರೊಂದೆ ಬೌಂಡಿ, ಒಂದು ಕಾರ್ಪೊರೇಷನ್, ಒಂದು ಮುನಿಸಿಪಾಲಿಟಿ ಒಂದು ತರಾವು ಪಾಸು ಮಾಡಿದರೆ ಅದಕ್ಕೆ ಹೆಚ್ಚು ಮಹತ್ವ ಕೊಡಬೇಕಾದ ಅವಶ್ಯಕತೆ ಇಲ್ಲ. ಮತ್ತು ಬೆಳಗಾಂ ಕರ್ನಾಟಕದಲ್ಲಿರಬೇಕೇ ಅಥವಾ ಇರಬಾರದೇ ಎನ್ನುವ ನಿರ್ಣಯ ಮಾಡುವವರು ಬೆಳಗಾಂ ಮುನಿಸಿಪಾಲಿಟಿಯಾಗಲೀ ಅಥವಾ ಬೆಳಗಾಂ ಕಾರ್ಪೊರೇಷನ್ ಆಗಲಿ ಅಲ್ಲ ಎಂಬುದನ್ನು ಸ್ಪಷ್ಟವಾಗಿ ನಾವು ತಿಳಿದುಕೊಳ್ಳಬೇಕು. ಅವರು ಮಾಡಿರುವಂತಹ ನಿರ್ಣಯದ ಮೇಲೆ ಹೆಚ್ಚು ಚರ್ಚೆ ಮಾಡುವುದಕ್ಕೆ ಹೋದರೆ ನಾವೇ ಅದಕ್ಕೆ ಪ್ರಾಮುಖ್ಯತೆ ಕೊಟ್ಟಂತಾಗುತ್ತದೆ. ಆದ್ದರಿಂದ ನಿರ್ಣಯವನ್ನು ಕಸದ ಬುಟ್ಟಿಗೆ ಹಾಕಿದ್ದೇವೆ ಎನ್ನುವಂತಹ ವಾತಾವರಣವನ್ನು ನಾವು ಬೆಳೆಸಿಕೊಂಡು ಹೋಗಬೇಕು. ಅವರು ನಿರ್ಣಯ ಮಾಡಿದ್ದಾರೆ. ಅದನ್ನ ಸರ್ಕಾರ ಒಪ್ಪಬೇಕು ತಾನೇ ಅಥವಾ ಅದರ ಮೇಲೆ ಮುಂದೆ ಏನು ಕ್ರಮ ತೆಗೆದುಕೊಳ್ಳಬೇಕು ? ಎನ್ನುವುದನ್ನು ವಿಚಾರ ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಈಗಿಂದೀಗಲೇ ತಂತಿ ಕಳಿಸಿ ಆ ಕಾರ್ಪೊರೇಷನ್‌ನ್ನು ಸೂಪರ್‌ಸೀಡ್ ಮಾಡಿ ಎಂದು ಹೇಳಿದರು. ಸರ್ಕಾರ ಯಾವ ವ್ಯವಹಾರ ಮಾಡಿದರೂ ಕೂಡ ಕಾನೂನು ಬದ್ಧವಾಗಿ ಮಾಡಬೇಕಾಗುತ್ತದೆ ಕಾನೂನಿಗೆ ಅನುಗುಣವಾಗಿ ಮಾಡಬೇಕಾಗಂತ್ತದೆ. ಕಾನೂನಿಗೆ ವ್ಯತ್ಯಿರಿಕ್ತವಾಗಿ ಮಾಡುವುದಕ್ಕೆ ನಾವು ಹೋದರೆ, ಅದು ಕೋರ್ಟು ಕಛೇರಿಗೆ ಹೋದರೆ, ನಿಲ್ಲುವುದಿಲ್ಲ. ಮತ್ತು ಕಾನೂನನ್ನು ಅತಿರಿಕ್ತವಾಗಿ ಮಾಡಿದರೆ ಅದ ಹಾಸ್ಯಾಸ್ಪದವಾಗಂತ್ತಿದೆ ಎಂಬ ಮಾತನ್ನು ನಾವು ಅರಿತು ಕೊಳ್ಳಬೇಕು. ಈಗ ಅವರು ಯಾವ ರೀತಿಯಲ್ಲಿ ತರಾವು ಪಾಸುಮಾಡಿದ್ದಾರೆ ಮತ್ತು ತಮ್ಮದೇ ಆದಂತಹ ಧ್ವಜವನ್ನು ಕಾರ್ಪೊರೇಷನ್ ಮೇಲೆ ಏನು ಹಾರಿಸಿದ್ದಾರೆ ಇದರ ಬಗ್ಗೆ ನಾವು ವಿಚಾರ ಮಾಡಬೇಕು. ಈ ಬಗ್ಗೆ ಕಾರ್ಪೊರೇಷನ್ ಆಕ್ಟ್‌ಪ್ರಕಾರ ಏನುಕ್ರಮ ಅವರ ಮೇಲೆ ತೆಗೆದುಕೊಳ್ಳಬೇಕಂ, ಎಂಬುದನ್ನು ಪರಿಶೀಲನೆ ಮಾಡಿ, ಕಾನೂನು ತಜ್ಞರಿಂದ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳಬೇಕೇ ಹೊರತು, ತರಾವು ಪಾಸು ಮಾಡಿದ್ದಾರೆ ಎಂದರೆ, ಮರುದಿವಸವೇ ಆ ಕಾರ್ಪೊರೇಷನ್ ಸಸ್ಪೆಂಡ್ ಮಾಡಿದ್ದೇವೆ ಎಂದು ಹೇಳುವುದು ಅಷ್ಟು ಯೋಗ್ಯವೂ ಅಲ್ಲ ಸೂಕ್ತವೂ ಅಲ್ಲ ಮತ್ತು ಕಾನೂನು ಬದ್ಧ ಕಾರ್ಯಕ್ರಮವೂ ಆಗುವುದಿಲ್ಲ. ಅವರು ಪಾಸ್‌ಮಾಡಿರತಕ್ಕ ತರಾವಿನ ಬಗ್ಗೆ ಅಧಿಕಾರಿಗಳಿಂದಲೂ ನಾವು ವರದಿ ತರಿಸಿಕೊಳ್ಳುತ್ತೇವೆ. ಏಕೆಂದರೆ ಪತ್ರಿಕೆಗಳಲ್ಲಿ ಬಂದ ವರದಿಯ ಆಧಾರದ ಮೇಲೆ ಸರ್ಕಾರ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈಗಾಗಲೇ ಅಧಿಕಾರಿಗಳಿಗೆ ತಿಳಿಸಿದ್ದೇನೆ. ವರದಿ ಬಂದ ಮೇಲೆ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ವಿಚಾರ ಮಾಡಲಾಗುವುದು. ಕರ್ನಾಟಕದ ಹಿತದೃಷ್ಟಿಯಿಂದ ಬೆಳಗಾಂ ಹಿತದೃಷ್ಟಿಯಿಂದ ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ನಾನಂ ಸಿದ್ಧನಿದ್ದೇನೆ.

ಶ್ರೀ ವಿ. ಎಸ್. ಕೌಜಲಗಿ — ಮಾನ್ಯ ಮುಖ್ಯ ಮಂತ್ರಿಗಳು ಕಾನೂನು ಪ್ರಕಾರ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ, ಬೆಳಗಾಂ ನಗರಪಾಲಿಕೆಯಲ್ಲಿ ಮೊದಲನೆಯ ಮೀಟಿಂಗ್ ಆದಮೇಲೆ ಭಗವಧ್ವಜವನ್ನು ಏರಿಸಿದ್ದಾರೆ. ಮೊನ್ನೆ ಬೆಂಗಳೂರಿನಲ್ಲಿ ದಿವಸ ಕನ್ನಡಿಗರು ಹೋಗಿ ಕನ್ನಡ ಧ್ವಜ ಏರಿಸುವ ಕಾಲಕ್ಕೆ, ಅವರ ಮೇಲೆ ಕಟ್ಟಳೆ ಹಾಕಿ ಅವರನ್ನು ಏತಕ್ಕೆ ಅರೆಸ್ಟ್ ಮಾಡಿದ್ದಿರಿ ? ಬೆಳಗಾಂನಲ್ಲಿ ನಾವು ಮೆಜಾರಿಟಿ ಇದ್ದೇವೆಂದು ಧ್ವಜ ಏರಿಸಿದ್ದಾರೆ. ಅದೇರೀತಿ ನಿಪ್ಪಾಣಿಯಲ್ಲೂ ಸಹ ತಮ್ಮ ಕಾಂಗ್ರೆಸ್ ಸರ್ಕಾರ ಇರುವಂತ ಪುರಸಭೆಯವರು ಭಗವಧ್ವಜವನ್ನು ಏರಿಸಿದ್ದಾರೆ. ಇದರ ಬಗ್ಗೆ ನಾನು ಗಮನಸೆಳೆಯುವ ಸೂಚನೆ ಕಳಿಸಿಕೊಟ್ಟಿದ್ದೇನೆ. ಸರ್ಕಾರಿ ಕಛೇರಿಗಳ ಮೇಲೆ ನಗರ ಸಭೆಗಳ ಮೇಲೆ ಯಾರು ಏನು ಬೇಕಾದರೂ ಮಾಡಬಹುದು ಏನ್ನುವುದನ್ನು ಇದು ತೋರಿಸುತ್ತದೆ.

ಯಾರು ಅಬಲರು ಇದ್ದಾರೋ ಅವರದ್ದು ನಡೆಯುವುದಿಲ್ಲ. ಯಾರು ಸಬಲರು ಇದ್ದಾರೋ ಅವರದ್ದು ನಡೆಯುತ್ತದೆ. ಆದ್ದರಿಂದ ಇವೊತ್ತು ಯಾವುದೇ ಶಾಂತಿಭಂಗ ಆಗುವಂತಾದ್ದು ಇದ್ದರೆ. ಡಿವಿಜನಲ್ ಕಮಿಷನರ್‌ರವರಿಗೆ ರೆಸಲ್ಯೂಷನ್ ಸಸ್ಪೆಂಡ್ ಮಾಡುವಂತಹ ಅಧಿಕಾರ ಇದೆ. ಹಿಂದೆ ಇದೇ ತರಹ ಒಂದು ರೆಸಲ್ಯೂಷನ್ ಪಾಸ್ ಮಾಡಿದಾಗ ಆಗಿನ ಡಿವಿಜನಲ್ ಕಮಿಷನರ್ ಅದರಿಂದ ಶಾಂತಿಭಂಗ ಆಗುತ್ತದೆ ಎನ್ನುವ ದೃಷ್ಟಿಯಿಂದ ೨೪ ಗಂಟೆಯೊಳಗೆ ಆರೆಸಲ್ಯೂಷನ್ ಅನ್ನು ಸಸ್ಪೆಂಡ್ ಮಾಡಿದ್ದರು ಈಗಲೂ ಸಹ ನಾವು ಡಿವಿಜನಲ್ ಕಮಿಷನರ್‌ರವರಿಗೆ ಹೇಳಿ ಈಗ ಮಾಡಿರತಕ್ಕ ರೆಸಲ್ಯೂಷನ್ ಅನ್ನು ಸಸ್ಪೆಂಡ್ ಮಾಡಿಸಬೇಕು. ಮತ್ತೆ ಭಗವಾ ಝಂಡಾ ಏನು ಏರಿಸಿದ್ದಾರೆ, ಅದನ್ನು ತೆಗೆಯುವಂತಹ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ — ಭಗವಾ ಝಂಡಾ ಮರಾಠಿ ಧ್ವಜ ತೆಗೆಯಬೇಕೆಂದು ನಾನು ಈ ಸಭೆಯಲ್ಲಿ ಮೂರು ನಾಲ್ಕುಸಾರಿ ಹೇಳಿದ್ದೇನೆ, ಸರ್ಕಾರದ ಗಮನಕ್ಕೆ ಅನೇಕಸಾರಿ ತಂದಿದ್ದೇನೆ.

ಸರ್ಕಾರದವರು ಈ ಸಭೆಯಲ್ಲಿ ಪರಿಣಾಮಕಾರಿಯಾಗಿ ಹೇಳುತ್ತಾರೆ, ಇದನ್ನು ಬದಲಾವ ಮಾಡುತ್ತೇವೆಂದು ಹೇಳುತ್ತಾರೆ. ಇವ್ಯಾತ್ತು ಅವರು ರಾಷ್ಟ್ರಧ್ವಜದ ಪಕ್ಕದಲ್ಲಿ ಮರಾಠಿ ಧ್ವಜವನು ಹಾರಿಸಿ ರಾಷ್ಟ್ರಧ್ವಜಕ್ಕೆ ಅಗೌರವ ಮಾಡಿದ್ದಾರೆ. ಮತ್ತು ತಮ್ಮದೇ ಆದಂಥ ಒಂದು ಸಿದ್ಧಾಂಥವನ್ನು ನಿರೂಪಣೆ ಮಾಡಿಕೊಂಡು, ತಮ್ಮದೇ ಆದಂಥ ಒಂದು ಪಕ್ಷದ ಕಾರ್ಯಾಲಯ ಮಾಡಿಕೊಂಡಿದ್ದಾರೆ, ಇದರ ಬಗ್ಗೆ ಸರ್ಕಾರ ಸ್ಪಷ್ಟವಾದ ನಿಲುವು ಏನು? ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಧ್ವಜವನ್ನು ತೆಗೆಯುವುದಕ್ಕೆ ಸರ್ಕಾರದ ಸ್ಪಷ್ಟವಾದ ನಿಲುವು ಏನು ಎಂದು ಹೇಳಬೇಕು, ಇಲ್ಲದೇ ಹೋದರೆ ರಾಜ್ಯದ ಎಲ್ಲಾ ಪುರಸಭೆ ಮತ್ತು ನಗರಸಭೆ, ನಗರಪಾಲಿಕೆ ಮೇಲೆ ಅವರವರ ಪಕ್ಷದ ಧ್ವಜ, ಭಾಷೆಯ ಧ್ವಜ ಧರ್ಮದ ಧ್ವಜ ಹಾಕಿಕೊಳ್ಳುತ್ತಾರೆ. ಅಥವಾ ಹಾಕಿಕೊಳ್ಳಬಹುದೇ ಅನ್ನುವುದರ ಬಗ್ಗೆ ನಿರ್ಣಯ ಆಗಬೇಕು. ಇಲ್ಲವೇ ಇಷ್ಟು ದಿವಸದಲ್ಲಿ ಧ್ವಜವನ್ನು ತೆಗೆಸುತ್ತೇವೆಂದು ತಾವು ಆಶ್ವಾಸನೆಯನ್ನು ಕೊಡಬೇಕು.

ಶ್ರೀ ವೀರೇಂದ್ರ ಪಾಟೀಲ್.—ಈಗಾಗಲೇ ಮಾನ್ಯ ಕೌಜಲಗಿಯವರು ಹೇಳಿದರು, ಯಾರೋ ಕನ್ನಡ ಧ್ವಜ ಏರಿಸುವ ಮುನ್ನ ಪೋಲೀಸರು ತಡೆಗಟ್ಟಿ ಅವರ ಮೇಲೆ ಕೇಸು ಹಾಕಿದ್ದಾರೆ ಎಂದು ಅದು ನನಗೆ ಗೊತ್ತಿಲ್ಲ. ವಿವರಗಳನ್ನು ಕೊಟ್ಟರೆ ನಾನು ವಿಚಾರಿಸುತ್ತೇನೆ.

ಶ್ರೀ ಎಸ್. ಹೆಚ್. ಕೌಜಲಗಿ.—ಇದು ಬೆಂಗಳೂರಿನಲ್ಲಿಯೇ ಆಗಿದೆ.

ಶ್ರೀ ವೀರೇಂದ್ರಪಾಟೀಲ್.—ನನಗೆ ಗೊತ್ತಿಲ್ಲ. ಏಕೆಂದರೆ ಐದು ದಿವಸಗಳಿಂದ ನಾನು ಬೆಂಗಳೂರಿನಲ್ಲಿ ಇರಲಿಲ್ಲ ತಾವು ವಿವರಗಳನ್ನು ಕೊಟ್ಟರೆ ನಾನು ಅದರ ಬಗ್ಗೆ ಏನು ಸಾಧ್ಯವಿದೆಯೊ ಅದನ್ನು ತರಿಸಿ ಹೇಳುತ್ತೇನೆ. ಮತ್ತೊಂದು ಈ ರೆಸೆಲ್ಯೂಷನ್ ಸಸ್ಪೆಂಡ್ ಮಾಡುವ ಅಧಿಕಾರ ಡಿವಿಜನಲ್ ಕಮಿಷನರ್‌ರವರಿಗೆ ಇದೆ ಎಂದು ಹೇಳಿದ್ದಾರೆ ಅದನ್ನೆ ನಾನು ಹೇಳಿದ್ದು. ಕಾನೂನಿನಲ್ಲಿ ಏನು ಮಾಡಲಿಕ್ಕೆ ಸಾಧ್ಯ ಇದೆ, ಅದನ್ನು ಮಾಡುತ್ತೇನೆ. ಮತ್ತು ನಮ್ಮ ಬೆಳಗಾಂನಲ್ಲಿರತಕ್ಕ ಅಧಿಕಾರಿಗಳ ಜೊತೆ ಸಂಪರ್ಕಮಾಡಿ ಅವರಿಂದ ಏನು ವರದಿಯನ್ನು ತರಿಸಿಕೊಳ್ಳಬೇಕೋ ಅದನ್ನು ತರಿಸಿಕೊಂಡಮೇಲೆ ಕಾನೂನು ಬದ್ಧವಾಗಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನು ಮಾನ್ಯ ವಾಟಾಳ್ ನಾಗರಾಜ್ ಅವರು ಭಗವಾ ಝಂಡಾ ಇರಬೇಕೆ, ತೆಗೆಯಬೇಕೆ. ಏನ್ನುವ ಬಗ್ಗೆ ವಿಚಾರ ಪ್ರಸ್ತಾಪ ಮಾಡಿದ್ದಾರೆ. ನಾವು ಏನೇ ಮಾಡಬೇಕಾಗಿದ್ದರೂ ಕೂಡ ಕಾನೂನುಬದ್ಧವಾಗಿ ಮಾಡಬೇಕಾಗುತ್ತದೆ. ಅದರ ಬಗ್ಗೆ ಪರಿಶೀಲನೆ ಮಾಡಿ ಯೋಗ್ಯ ಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಾಗಿದ್ದೇನೆ.

ಶ್ರೀ ವಾಟಾಳ್ ನಾಗರಾಜ್.—ತಾವು ಎಷ್ಟು ದಿವಸದಲ್ಲಿ ಕಾನೂನು ಮಾಡುವುದು ನಿಮ್ಮ ಸರ್ಕಾರ ಬಂದಾಗಿನಿಂದಲೂ ನಾನು ಹೇಳುತ್ತಿದ್ದೇನೆ ತಮಗೆ ಇನ್ನೂ ಕ್ರಮ ತೆಗೆದುಕೊಳ್ಳಲಿಕ್ಕೆ ಆಗಿಲ್ಲ. ಇದು ನಿಮ್ಮ ನಿಶ್ಯಕ್ತಿಯನ್ನು ತೋರಿಸುತ್ತದೆ. ಇದರಿಂದ ನನಗೆ ಬಹಳ ನೋವಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ ಫ್ಲಡ್ ಡ್ಯಾಮೇಜಸ್ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ.

(ಗೊಂದಲ)

ಅಧ್ಯಕ್ಷರು.—ಆರ್ಡರ್, ಆರ್ಡರ್.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ, ಇವರ ಅಶಕ್ತತೆಯ ಬಗ್ಗೆ ನಾನು ವಿರೋಧಿಸಿ ಸಭಾತ್ಯಾಗ ಮಾಡಬೇಕಾಗಿದೆ.

(ಗೊಂದಲ)

ಅಧ್ಯಕ್ಷರು.—ಆರ್ಡರ್, ಆರ್ಡರ್, ಆರ್ಡರ್.

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೆ ನನ್ನಗೆ ಮನಸ್ಸಿಗೆ ಅತ್ಯಂತ ನೋವಾಗುತ್ತದೆ. ಈ ಸರ್ಕಾರದ ಒಂದು ಅಶಕ್ತತೆಯನ್ನು, ನಿರಾತ್ಸಾಹವನ್ನು ನಾನು ವಿಧಿಯಿಲ್ಲದೆ. ಪ್ರತಿಭಟಿಸಬೇಕಾಗುತ್ತದೆ ಇವರು ಮಾಡತಕ್ಕದ್ದು. ಸರಿಯಿಲ್ಲ ಎಂದು ಹೇಳಿ, ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಅಧ್ಯಕ್ಷರೆ ಫ್ಲಡ್ ಡ್ಯಾಮೇಜ್ ಬಗ್ಗೆ ನಾನು ಒಂದು ಕಾಲ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದೆ. ನನ್ನ ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ೧೭ ಟ್ಯಾಂಕುಗಳು ಬ್ರೀಚ್ ಆಗಿ ಲಕ್ಷಾಂತರ ರೂಪಾಯಿ ಆಸ್ತಿಪಾಸ್ತಿ ಹಾಳಾಗಿದೆ ಅದೇರೀತಿ...

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅಧ್ಯಕ್ಷರೆ, ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ಹೇಳಿದ್ದೆವು.

ಅಧ್ಯಕ್ಷರು.—ಮಾನ್ಯ ಸಚಿವರು ಸ್ಟೇಟ್‌ಮೆಂಟ್ ಮಾಡುತ್ತೇವೆಂದು ತಿಳಿಸಿದ್ದರು, ಈಗ ತಾವು ಸಿದ್ದರಿದ್ದೀರಾ?

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸಿದ್ಧವಾಡಿಕೊಂಡಿದ್ದೇನೆ. ನಾಳೆಯವರೆಗೆ ಕಾಲಾವಕಾಶ ಕೊಡಿ. ನಾಳೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನನ್ನೆ ಕೇಳಿದರೆ ಇವತ್ತು ಕೊಡುತ್ತೇನೆಂದು ಹೇಳಿದರು ಇವತ್ತು ಕೇಳಿದರೆ ನಾಳೆ ಮಾಡುತ್ತೇನೆಂದು ಹೇಳುತ್ತಿದ್ದಾರೆ.

ಅಧ್ಯಕ್ಷರು.—ಆಗಲಿ ಅವಕಾಶ ಕೊಡಿ.

ಶ್ರೀ ಜಿ.ರಾಜೂಗೌಡ —ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರವಾದ ಹಾನೂರುನಿಂದ ಅನೇಕ ತಂತಿ ಸಂದೇಶಗಳು ಬಂದಿವೆ. ಅಲ್ಲಿ ಕಳೆದ ೨೫ ದಿವಸಗಳಿಂದ ಕುಡಿಯುವ ನೀರಿಗೆ ತೊಂದರೆ ಆಗಿದೆ ಎಂದು...

ಅಧ್ಯಕ್ಷರು—ತಾವು ಗಮನ ಸೆಳೆಯುವ ಸೂಚನೆಯನ್ನು ಕಳಿಸಿಕೊಡಿ. ನೋಡೋಣ.

ಗಮನ ಸೆಳೆಯುವ ಸೂಚನೆಗಳು

ವಿಜಯನಗರದ ಹಳೆಯ ಕಾಲುವೆಗಳು ರಿಪೇರಿಯಿಲ್ಲದೆ ರೈತರ ಬೆಳೆಗೆ ತೊಂದರೆ.

ಶ್ರೀರಂಗದೇವರಾಯಲು:—ವಿಜಯನಗರ ಹಳೇ ಕಾಲುವೆಗಳ ರಿಪೇರಿಯಿಲ್ಲದೆ ರೈತರ ಬೆಳೆಗೆ ನೀರಿಲ್ಲದ ತೊಂದರೆಯಾಗಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಜಿ ಪುಟ್ಟಸ್ವಾಮಿ ಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ.

ತುಂಗಭದ್ರಾ ನದಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ನಿರ್ಮಾಣಮಾಡಿ "ವಿಜಯನಗರದ ಕಾಲುವೆಗಳು" ಎಂಬ ನಾಮಾಂಕಿತದಿಂದಲೇ ಸ್ಪಷ್ಟೀಕರಣವಾಗುವಂತೆ, ವಿಜಯನಗರ ಸಾಮ್ರಾಟರಿಂದ ಶತಮಾನಗಳ ಹಿಂದೆ ಕಾಲುವೆಗಳನ್ನು ನಿರ್ಮಾಣಮಾಡಲಾಗಿದ್ದು, ಈ ನಾಲೆಗಳು ವೈಶಿಷ್ಟಪೂರ್ಣವಾಗಿ ಕಾಂಟೂರ್ ಪಂಕ್ತಿಕರಣದಲ್ಲಿ ಹಾಯ್ದಿರುವುದು. ಈ ನಾಲೆಗಳಿಂದ ರಾಯಚೂರು ಜಿಲ್ಲೆಯ ಗಂಗಾವತಿ ಮತ್ತು ಕೊಪ್ಪಳ ತಾಲ್ಲೂಕುಗಳಲ್ಲಿಯು ಮತ್ತು ಬಳ್ಳಾರಿ ಜಿಲ್ಲೆಯ ಹೊಸಪೇಟೆ ಹಾಗೂ ಶಿರಗುಪ್ಪ ತಾಲ್ಲೂಕಿನ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ. ರಾಯಚೂರು ಜಿಲ್ಲೆಯಲ್ಲಿ ಆರು ಕಾಲುವೆಗಳು ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಹತ್ತು ಕಾಲುವೆಗಳು ಈ ಪುರಾತನ ಅಣೆಕಟ್ಟುಗಳಿಂದ ಹರಿಯುವುದು. ಈ ನಾಲೆಗಳ ನಾಮಾಂಕಿತ ಕೆಳಕಂಡಂತೆ ಸೂಚಿಸಲಾಗಿದೆ.

ಕ್ರಮ ಸಂಖ್ಯೆ	ರಾಯಚೂರು ಜಿಲ್ಲೆ ವ್ಯಾಪ್ತಿ	ಬಳ್ಳಾರಿ ಜಿಲ್ಲೆ ವ್ಯಾಪ್ತಿ
೧.	ಹುಲಗಿ ನಾಲೆ	೧. ರಾಯನಾಲೆ
೨.	ಶಿವಪುರು ನಾಲೆ	೨. ಬಸಪ ನಾಲೆ
೩.	ಆನೆಗುಂಡಿ ನಾಲೆ,	೩. ಬೆಲ್ಲನಾಲೆ
೪.	ಅಪ್ಪರ್ ಗಂಗಾವತಿ ನಾಲೆ	೪. ಕಲ್ಕಟ್ಟನಾಲೆ
೫.	ಲೋಯರ್ ಗಂಗಾವತಿ ನಾಲೆ	೫. ತುರ್ತಾ ನಾಲೆ
೬.	ಬೈಚಾಲ್ ನಾಲೆ	೬. ರಾಮಸಾರ್ಗನಾಲೆ
		೭. ಕಂಪ್ಲಿ ನಾಲೆ
		೮. ಬೆಲ್‌ಗೋದಾಲ್ ನಾಲೆ
		೯. ಸಿರಗುಪ್ಪನಾಲೆ
		೧೦. ದೇಶನೂರ್ ನಾಲೆ